## 'ಕಾವ್ಯ ಸುಧಾ'

ನಮ್ಮದು ಅವಿಭಕ್ತ ಕುಟುಂಬ. ಬೆಂಗಳೂರಿನ ಲಾಲ್‌ಬಾಗ್ ಹತ್ತಿರ ಮನೆ. ನಮ್ ತಂದೆ ವೈದ್ಯರು. ಸುಮಾರು 30 ಮಂದಿ. 'ಪ್ರಜಾವಾಣಿ'ಯನ್ನು ದಿನನಿತ್ಯ ಎಲ್ಲರೂ ತಪ್ಪದೆ ಓದುತ್ತಿದ್ದೆವು, ಸರತಿಯಲ್ಲಿ... ನನ್ನ ಸರದಿ ಸಂಜೆ. ಕಾರಣ, ನಾನು ವಿದ್ಯಾರ್ಥಿ. ಅಣ್ಣಂದಿರು ಕೆಲಸಗಳಿಗೆ ಹೋಗುವುದಿತ್ತು.

'ಪ್ರಜಾವಾಣಿ' ಬಳಗ ನೂತನ ವಾರಪತ್ರಿಕೆಗೆ ಓದುಗರಿಂದ ಹೆಸರು ಸೂಚಿಸುವಂತೆ ಕೇಳಿತ್ತು. ನಮ್ಮಲ್ಲಿ ಎಲ್ಲರೂ ಕುಳಿತು ಚರ್ಚಿಸಿ ಹಲವು ಹೆಸರು ಹೆಕ್ಕಿ ತೆಗೆದೆವು. ಕೊನೆಗೆ ನನ್ ಅಣ್ಣ ಶಂಕರನಾರಾಯಣ ಮತ್ತು ಪ್ರಭಾಕರ್ ಒಂದು ಹೆಸರು ಗಟ್ಟಿಮಾಡಿ ಕಳುಹಿಸಿದರು. ಅರ್ಧ ಸತ್ಯವಾಗಿತ್ತು ಅದು. ನಾವು ಸೂಚಿಸಿದ ಹೆಸರು 'ಕಾವ್ಯ ಸುಧಾ'.




ಅದಾದ ಕೆಲವು ತಿಂಗಳಲ್ಲಿ ನಾನೊಂದು ನಗೆಲೇಖನ ಬರೆದು ಕಳಿಸಿದ್ದೆ. ಒಂದೆರಡು ತಿಂಗಳ ನಂತರ ಒಂದು ಪತ್ರ ಕಾರ್ಡಿನ ರೂಪದಲ್ಲಿ ನನ್ ಹೆಸರಿಗೆ ಬಂತು.

ಕಾರ್ಡಿನ ಎಡಬದಿ ಮೇಲೆ 'ಸುಧಾ' ಎಂದು ಅಚ್ಚಾಗಿತ್ತು. ಕೆಳಗೆ ಬಲಬದಿ ಸಂಪಾದಕರ ಸಹಿ ಇತ್ತು. ಮಧ್ಯೆ ಪ್ರಕಟವಾಗಿತ್ತು... 'ತಾವು ಕಳಿಸಿರುವ ಲೇಖನ ಕೆಂಪುತೋಟದಲಿ ವಿದ್ಯಾಭ್ಯಾಸ ಪ್ರಕಟಣೆಗಾಗಿ ನಮ್ಮಲ್ಲೇ ಉಳಿಸಿಕೊಂಡಿದ್ದೇವೆ'. ಬಹುಶಃ ಅಂದು ನನಗಾದ ಆನಂದ ಹೇಳಲು ಪದಗಳೇ ಇರಲಿಲ್ಲ.

ಅದೆಷ್ಟು ಸಲ ಓದಿದೆನೊ... ಮಲಗುವಾಗ ತಲೆದಿಂಬಿನ ಅಡಿ ಇಟ್ಟು ಮಲಗಿದೆ. ಇಡೀ ರಾತ್ರಿ ನಿದ್ದೆ ಬರಲೇ ಇಲ್ಲ ಅನ್ನೋದು ಸತ್ಯ. ಅದುವೆ ನನ್ನ ಮತ್ತು ನನ್ನ ಕುಟುಂಬ ಹಾಗೂ ನಲ್ಮೆಯ, ಕನ್ನಡಿಗರ ಮನ ಮನೆ ಮಾತಾಗಿರುವ 60 ಪ್ರಾಯದ 'ಸುಧಾ'... ಸುಧೆಯಂತಹ ನಂಟು...

—ನೊಣವಿನಕೆರೆ ರಾಮಕೃಷ್ಣಯ್ಯ




## 'ಸುಧಾ' ಓದುವ ಆನಂದ

'ಸುಧಾ' ವಾರಪತ್ರಿಕೆ ಶುರುವಾದಾಗಿನಿಂದ ಇಂದಿನವರೆಗೂ ನಾನೊಬ್ಬ ಕಾಯಂ ಓದುಗ. 'ಸುಧಾ' ಬಂದ ತಕ್ಷಣ ಮೊದಲ ಪುಟದಿಂದ ಹಿಡಿದು ಕೊನೆಯ ಪುಟದ ತನಕ ಅವಲೋಕನ ಮಾಡಿ ಯಾವುದನ್ನು ಮೊದಲು, ನಂತರ ಓದುವುದೆಂದು ತೀರ್ಮಾನಿಸಿ ಅವುಗಳನ್ನು ಮಕ್ಕಳು ಚಾಕೊಲೇಟನ್ನು ಸ್ವಲ್ಪ ಸ್ವಲ್ಪವಾಗಿ ಸವಿದು ಸಂತೋಷಪಡುವಂತೆ ಒಂದು ವಾರದ ತನಕ ಎಲ್ಲಾ ಕಥೆಗಳು, ಲೇಖನಗಳು ಮತ್ತು ಸ್ಥಿರ ಶೀರ್ಷಿಕೆಗಳನ್ನು ಓದಿ ಖುಷಿಪಡುತ್ತೇನೆ.

ಹಿಂದೆ ಸಂಗ್ರಹಯೋಗ್ಯವಾದ ಲೇಖನ, ಚಿತ್ರಗಳು ಮತ್ತು ವಿಶೇಷ ಪುಟಗಳನ್ನು ಕತ್ತರಿಸಿ ವಿಷಯಾವಾರು (ಕಾವ್ಯಸುಧಾ, ಕಾಮಧೇನು ಅಡುಗೆ, ಅಂದಕ್ಕೆ ಆಯುರ್ವೇದ, ಸಸ್ಯಲೋಕ, ಹಣ್ಣುಹಂಪಲು, ಶಕಪುರುಷರು, ಶಿಕ್ಷಣ, ಕಲೆ ಮತ್ತು ಅನೇಕ ವಿಷಯಗಳು) ವಿಂಗಡಿಸಿ ಹಳೆಯ ಪುಸ್ತಕಗಳ ಪುಟಗಳಿಗೆ ಅಂಟಿಸಿ ಸಂಗ್ರಹಿಸಿ ಬೇಕಾದಾಗ ಓದಿ ಆನಂದಿಸುತ್ತಿದ್ದೆ ಹಾಗೂ ಸ್ನೇಹಿತರು, ನೆಂಟರಿಗೆ ತೋರಿಸಿ ಹೆಮ್ಮೆ ಪಡುತ್ತಿದ್ದೆ. ಈಗಲೂ ಆ ಸಂಗ್ರಹ ನನ್ನ ಮನಸ್ಸನ್ನು ಸಂತೋಷಗೊಳಿಸುವ ಸಾಧನವಾಗಿದೆ.

—ಹಿ.ಶಾ. ಸುಬ್ರಹ್ಮಣ್ಯ, ಬೆಂಗಳೂರು

## ಧನ್ಯವಾದ

'ಸುಧಾ' ಎಂದರೆ ನನಗೆ ಅಚ್ಚುಮೆಚ್ಚು. ಚಿಕ್ಕವಳಿದ್ದಾಗಿನಿಂದ ತಪ್ಪದೇ ಓದುತ್ತಿದ್ದ ಪತ್ರಿಕೆಯಿದು. ನಾನೂ ಮಕ್ಕಳ ಕಥೆ, ಚುಟುಕು, ಜೋಕ್ಸ್ ಬರೆದು ಕಳುಹಿಸಿದ್ದೆ. ಅವನ್ನು ಪ್ರಕಟಿಸಿ ಪ್ರೋತ್ಸಾಹಿಸಿದ 'ಸುಧಾ'ಗೆ ಧನ್ಯವಾದ. ಓದುಗರಿಗೆ ಉತ್ತೇಜನ ಕೊಡುವ ಪತ್ರಿಕೆ ಹೀಗೇ ಬೆಳೆಯುತ್ತಲಿರಲಿ.

—ಬಿ.ಆರ್. ಉಷಾ

## ಹಿರಿತನ ಗಳಿಸಿ ಬೆಳೆದ ಪತ್ರಿಕೆ

ನಮ್ಮ ಮೆಚ್ಚಿನ 'ಸುಧಾ', ಸಂವತ್ಸರ ಸರಣಿಯ ಅರವತ್ತು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಮುನ್ನುಗ್ಗುತ್ತಿದೆ. ಈ ಸಾಧನೆ ಯಾವುದೇ ದಿನಪತ್ರಿಕೆ, ವಾರಪತ್ರಿಕೆ ಅಥವಾ ಮಾಸಪತ್ರಿಕೆಗೆ ಒಂದು ಅವಿಸ್ಮರಣೀಯ ಸಂಗತಿ. ಈ ಸುದೀರ್ಘ ಅವಧಿಯಲ್ಲಿ ಅರವತ್ತರ ಹಿರಿತನ ಗಳಿಸಿ, ಶತಕದತ್ತ ಮುಂದೋಡುತ್ತಿರುವುದು ನಮ್ಮಂತಹ ಓದುಗ ಬಳಗಕ್ಕೂ ಖುಷಿಯ ಸಂಗತಿ.

ನಾನೂ ಈಗ ಷಷ್ಟ್ಯಬ್ದಿಯ ಹೊಸ್ತಿಲಲ್ಲಿರುವ ಐವತ್ತೊಂಬತ್ತರ ಯುವಕ. 'ಸುಧಾ' ವಾರಪತ್ರಿಕೆ ನನಗೆ ಒಂದು ವರ್ಷದ ಹಿರಿಯಕ್ಕ. 'ಸುಧಾ' ಸಹೋದರಿಯೊಂದಿಗೆ ನನ್ನ ಒಡನಾಟ ಪ್ರಾರಂಭವಾಗಿದ್ದು ಸುಮಾರು 40 ವರ್ಷಗಳ ಹಿಂದೆ. ಆಗ ನಮ್ಮ ಗಮನ ನಗೆಪುಟ, ಕಿರುಗಥೆಗಳು, ಬಾಲವನ, ಸಚಿತ್ರ ಕಥೆಗಳು ಮುಂತಾದವು. ಕಳೆದ ಮೂವತ್ತು ವರ್ಷಗಳಿಂದ 'ಸುಧಾ' ನಮ್ಮ ಕುಟುಂಬದ ನಿತ್ಯ ಸಂಗಾತಿ. ಪ್ರತಿ ಗುರುವಾರ ಮನೆಗೆ ಸುಧಾಗಮನವಾಗಲೇಬೇಕು.

ಅಂದಿನಂತೆ ಇಂದೂ ನಮ್ಮ ನೆಚ್ಚಿನ 'ಸುಧಾ' ತನ್ನ ಹೊಳಪು ಮತ್ತು ಹೊಸತನ ಕಾಪಾಡಿಕೊಂಡು, ತನ್ನೊಳಗೆ ಕಥೆ, ಧಾರಾವಾಹಿ, ಲೇಖನ, ಮುಂತಾದ ಗುಣಮಟ್ಟದ ಮೆದುಳಿನ ತಿನಿಸುಗಳನ್ನು ಹೊತ್ತು ತರುತ್ತಿದ್ದಾಳೆ. ನಾವು 30 ವರ್ಷಗಳ ಹಿಂದೆ ಮಲೆನಾಡಿನ ನಮ್ಮ ಹಳ್ಳಿ ಹೆಗ್ಗೋಡನ್ನು ಬಿಟ್ಟು, ಬೆಂಗಳೂರಿನ ಮಹಾನಗರಕ್ಕೆ ಬಂದು ಬದುಕನ್ನು ಕಟ್ಟಿಕೊಂಡರೂ, ನಮ್ಮಕ್ಕ 'ಸುಧಾ' ನಮ್ಮನ್ನು ಬಿಟ್ಟು ಹೋಗಿಲ್ಲ. ಇದು ನಮ್ಮ ನಡುವಣ ಅಭಿಮಾನ, ಅನುಬಂಧದ ಪರಿ. ಈಗಲೂ 'ಸುಧಾ' ಅಕ್ಕ ಮನೆಗೆ ಬಂದ ದಿನವೇ ಒಮ್ಮೆ ಕಣ್ಣಾಡಿಸಿ, ಖುಷಿಪಡುವ ಪದ್ಧತಿ ನಿರಂತರವಾಗಿ ನಡೆಯುತ್ತಿದೆ. ನಾವು ದಂಪತಿಯಷ್ಟೇ ಅಲ್ಲ, ನಮ್ಮ ವೃದ್ಧ ತಂದೆತಾಯಿಗೂ 'ಸುಧಾ' ಎಂಬ ಮಗಳು ಅಚ್ಚುಮೆಚ್ಚು. ನಮ್ಮ ನೆಚ್ಚಿನ 'ಸುಧಾ' ಶತಮಾನದ ಅಪೂರ್ವ ಸಾಧನೆ ಮಾಡಲಿ.

—ಪದ್ಮಜಾ ಮತ್ತು
ಎಚ್.ಆರ್. ಶ್ರೀಪಾದ ಭಾಗಿ

'ಸುಧಾ' ಜೊತೆಗಿನ ಓದುಗರ ಒಡನಾಟ

## ಬರೆದವರಿಗೇ ಕರಡು!

ಇದುವರೆಗೆ ಸುಮ್ಮನಿದ್ದು, ಈಗ ಹೇಳುತ್ತಿದ್ದೇನೆ: 'ಸುಧಾ' ನನಗೆ ಆಜನ್ಮ ಪರಿಚಿತೆ! ಪರಿಚಯ ಮಾತ್ರವಲ್ಲ, ಆಕೆಯನ್ನು ಸ್ವಲ್ಪ ಕಾಲ ನಾನೂ ಎತ್ತಿ ಆಡಿಸಿದವನು!

ಸಾಮಾನ್ಯವಾಗಿ ನಾನು ಸಾಹಿತ್ಯಿಕ ಲೇಖನಗಳನ್ನು ಕಳುಹಿಸುತ್ತಿದ್ದೆ (ಸಾಹಿತ್ಯ ವಿಮರ್ಶೆ ಬೇರೆ). ಉದಾ.ಗೆ: 'ಜಗನ್ನಾಥ ಪಂಡಿತನ ಗಂಗಾಲಹರಿ'.

ಒಂದು ಮುಖ್ಯಾಂಶ. ನನ್ನ ಲೇಖನಗಳ ಕರಡಚ್ಚುಗಳನ್ನು (proof) ನನಗೇ ಕಳುಹಿಸಲಾಗುತ್ತಿತ್ತು, ತಿದ್ದುಪಡಿಗಾಗಿ! ಈ ವಿಚಿತ್ರ ವಿದ್ಯಮಾನವನ್ನು ಹಾ.ಮಾ. ನಾಯಕರ ಗಮನಕ್ಕೆ ತಂದಾಗ, ಅಚ್ಚರಿಯಿಂದ ಉದ್ಗರಿಸಿದರು: 'ನಮ್ಮ ವಿ.ವಿ. ನಿಲಯದ ಪತ್ರಿಕೆಯಲ್ಲೂ ಇಂಥ ವ್ಯವಸ್ಥೆಯಿಲ್ಲ, ನೋಡಿ!'

'ಸುಧಾ' ಊರ್ಧ್ವಮುಖವಾಗಿ ಬೆಳೆಯುತ್ತಿದೆ: 'ಚಿರಮಭಿವರ್ಧತಾಂ!'

—ಸಿಪಿಕೆ, ಮೈಸೂರು